

ಅಂದಿದ್ದರು. ತೀರಾ ಅಪರಿಚಿತನಾಗಿದ್ದ ಚೋಮ ಪರಿಚಿತನಾಗಿದ್ದು ಹೀಗೆ.

ನಮ್ಮನೆಯ ಅಂಗಳದವರೆಗೆ ಬಂದು ನಡು ಬಗ್ಗಿಸಿ ನಿಲ್ಲುವ, ಒಳ ಕರೆದರೆ ಬಾರದ, ಬಂದರೂ ಅಪ್ಪ ಅಜ್ಜ ಎಷ್ಟು ಒತ್ತಾಯಿಸಿದರೂ ಡೈನಿಂಗ್ ಟೇಬಲ್ ಮೇಲೆ ಕೂತು ಉಣ್ಣಲು ಸುತರಾಂ ಒಪ್ಪದೇ ಇರಲಿಕ್ಕಿರುವ ಕಾರಣಗಳೂ ಸೂಕ್ಷ್ಮವಾಗಿ ಅರ್ಥವಾಗತೊಡಗಿದ್ದೂ ಆನಂತರವೇ. ಪಕ್ಕದ ಭಟ್ಟರ ಮನೆಯ ದೇವರ ಕೋಣೆ ಒಂದು ಬಿಟ್ಟು ಉಳಿದೆಲ್ಲಾ ಕಡೆ ನನಗೆ ಪ್ರವೇಶವಿದ್ದರೂ ನನ್ನನ್ನು ಅಲ್ಲಿಯವರೆಗೆ ಕರೆದುಕೊಂಡು ಹೋಗುತ್ತಿದ್ದ ಅಜ್ಜನ ಗೆಳೆಯ ಚೆನ್ನಪ್ಪಜ್ಜ ಅಲ್ಲಿಂದ ಮುಂದೆ ಯಾಕೆ ಬರುವುದಿಲ್ಲ ಎನ್ನುವ ಪ್ರಶ್ನೆಗೂ ನಿಧಾನಕ್ಕೆ ಉತ್ತರ ಸಿಕ್ಕಲಾರಂಭಿಸಿತು. ಚೋಮ ನನಗೆ ಪ್ರಪಂಚವನ್ನು ನನ್ನದೇ ಕಣ್ಣುಗಳಿಂದ ನೋಡಲು ಕಲಿಸಿದ್ದ.

ಆ ಚಿಕ್ಕ ವಯಸ್ಸಿನಲ್ಲಿ ಪುಸ್ತಕ, ಓದು, ಶಾಲೆ, ಆಟ ,ಪಾಠ ಅಂತ ಹಾಯಾದ, ಒಂದು ಸೆಕ್ಯೂರ್ ಆದ ಬದುಕನ್ನು ಮಾತ್ರ ಕಂಡಿದ್ದ ನನಗೆ ಚೋಮನ ಬದುಕು ಎಂಥಾ ಗಲಿಬಿಲಿಯನ್ನು ಉಂಟು ಮಾಡಿತ್ತೆಂದರೆ ನನ್ನ ಅದುವರೆಗಿನ ಬದುಕೇ ಸುಳ್ಳು ಅನಿಸತೊಡಗಿತ್ತು, ನಾನು ಇದುವರೆಗೆ ಬದುಕೇ ಇಲ್ಲ, ಬರಿ ನೆರಳನ್ನೇ ಬದುಕು ಎಂದು ಭ್ರಮಿಸಿದ್ದೆ ಎಂದೆಲ್ಲಾ ಭಾವಿಸತೊಡಗಿದ್ದೆ. ಕೂತಲ್ಲಿ, ನಿಂತಲ್ಲಿ ಕಾಡುತ್ತಿದ್ದ ಚೋಮ ನನ್ನನ್ನು ಯಾವ ಪರಿ ಕಂಗೆಡಿಸಿದ್ದನೆಂದರೆ ದೂರದಲ್ಲೆಲ್ಲಾದರೂ ಚೋಮನಂತಹ ವ್ಯಕ್ತಿ ಕಾಲೆಳೆಯುತ್ತಾ ನಡೆಯುತ್ತಿದ್ದರೆ ಅಳು ಬಂದಂತಾಗುತ್ತಿತ್ತು. ಚೋಮನಿಗಾದ ಅನ್ಯಾಯದಲ್ಲಿ ನನ್ನ ಪಾಲೆಷ್ಟಿರಬಹುದು ಎಂದು ಪದೇ ಪದೇ ಮರುಗುತ್ತಿದ್ದೆ.

ಚೋಮನಿಗಿದ್ದುದು ಒಂದು ಪುಟ್ಟ ಆಸೆ. ಒಂದು ಗೇಣಾದರೂ ಸರಿ, ಭೂಮಿ ಉತ್ತು ಬೇಸಾಯಗಾರನಾಗಬೇಕೆಂಬುವುದು. ನಮಗೂ ನಿಮಗೂ ಎಲ್ಲರೊಳಗೆ ಮೂಡಬಹುದಾದಂತಹ ಒಂದು ಆಸೆ ಅದು. ಆದರೆ ಅದನ್ನು ಕೈಗೂಡಿಸಿಕೊಳ್ಳವಲ್ಲಿ ಚೋಮ ಎದುರಾದದ್ದು ಮಾತ್ರ ದುರಂತಗಳ ಸರಮಾಲೆಯನ್ನು. ಗುರುವನನ್ನು ಕಳೆದುಕೊಂಡ, ಚನಿಯನನ್ನು ಕಳೆದುಕೊಂಡ, ನೀಲನನ್ನು ಕಳೆದುಕೊಂಡ, ಬೆಳ್ಳಿಯನ್ನು ಕಳೆದುಕೊಂಡ, ಕೊನೆಗೆ ತನ್ನ ಪ್ರಾಣದಂತಿದ್ದ ಎರಡು ಎತ್ತುಗಳನ್ನೂ ಕಳೆದುಕೊಂಡ. ಕೊನೆ ಕ್ಷಣದವರೆಗೂ ಅವನ ಬಳಿ ಅವನದಾಗಿ ಉಳಿದುಕೊಂಡದ್ದು ಅವನ ದುಡಿ ಮಾತ್ರ.

ಒಂದು ಹಂತದಲ್ಲಿ ಅವನ ಧಣಿ, ಚೋಮ ಒಳ್ಳೆಯ